# ಮೇಕೆ ಮೂತಿಗೆ ಮೆತ್ತುವ ಸುಖ

'ತಡವಾಗಿ ಬಂದದ್ದು ಯಾಕೆ? ಸಾರಿ ಕೇಳಿ' ಆ ಸುದ್ದಿಮಿತ್ರರು ನಟೀಮಣಿಯನ್ನು ಹೀಗೆ ಕೇಳಿದ್ದರಲ್ಲಿ ತಪ್ಪೇನೂ ಇರಲಿಲ್ಲ. ಯಾಕೆಂದರೆ, ನಟಿ ಕೆಲವು ನಿಮಿಷಗಳಷ್ಟೇ ತಡವಾಗಿ ಬಂದಿರಲಿಲ್ಲ, ಗಂಟೆ ದಾಟಿತ್ತು. ಸುದ್ದಿಮಿತ್ರರು ಎದ್ದುನಿಂತೇ ಪ್ರಶ್ನೆ ಕೇಳಿದರಾದರೂ ನಟೀಮಣಿ ತಕ್ಷಣಕ್ಕೆ ನಿಲ್ಲುವ ಕಷ್ಟ ತೆಗೆದುಕೊಳ್ಳಲಿಲ್ಲ. ನಿರ್ಮಾಪಕರಿಗೆ ಹೇಳಿದ್ದ ಸಮಯಕ್ಕೇ ತಾವು ಬಂದಿರುವುದಾಗಿ ಸಮಜಾಯಿಷಿ ಕೊಟ್ಟ ಅವರು, ತಡವಾಗಿ ಬಂದೇ ಇಲ್ಲ ಎಂದು ವಾದಿಸಿದರು. ಅಷ್ಟು ಹೊತ್ತು ಕಾದಿದ್ದ ಪತ್ರಕರ್ತರೆಲ್ಲಾ ದಂಗಾದರು. ಪ್ರಶ್ನೆ ಕೇಳಿದ ಸುದ್ದಿಮಿತ್ರರಂತೂ 'ಒಂದು ಸಾರಿ ಕೇಳುವ ಸೌಜನ್ಯವೂ ಇಲ್ಲವಲ್ಲ' ಎಂದು ಪೇಚಾಡಿಕೊಂಡು ಅಲ್ಲಿಂದ ಹೊರಟರು.

ಕಾಲ ಉರುಳಿತು. ಅದೇ ನಟೀಮಣಿ. ಅದೇ ಸುದ್ದಿಮಿತ್ರ. ಒಂದೇ ವೇದಿಕೆ ಮೇಲಿದ್ದರು! ಪುಸ್ತಕ ಬರೆಯುವ ಹವ್ಯಾಸವಿರುವ ಸುದ್ದಿಮಿತ್ರರು ಅದರ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದವರಲ್ಲಿ ಆ ನಟಿಯೂ ಸೇರಿದ್ದರು!

ಇಂಗ್ಲಿಷ್ ಮಾಧ್ಯಮದ ಆಯ್ದ ಲಲನೆಯರಿಗೂ ಆ ನಟಿಗೂ ಸ್ನೇಹ. ಸಾಮಾಜಿಕ ಜಾಲತಾಣಗಳೆಂದರೆ ಅಚ್ಚುಮೆಚ್ಚು. ಫೋನ್‌ನಲ್ಲಿ ಮಾತನಾಡುವುದಕ್ಕಿಂತ ಚುಟುಕು ಸಂದೇಶಗಳನ್ನು ಟೈಪಿಸಿ ಕಳುಹಿಸುವುದೆಂದರೆ ಡೋನಟ್ ತಿಂದಷ್ಟು ಖುಷಿ. ಗುಡ್ ಮಾರ್ನಿಂಗ್, ಗುಡ್ ಈವ್‌ನಿಂಗ್, ಗುಡ್ ನೈಟ್ ಸಂದೇಶಗಳನ್ನು ಆ ಆಯ್ದ ಕೆಲವರಿಗೆ ನಟಿ ರವಾನಿಸುವುದು ರೂಢಿ. ಇಂಗ್ಲಿಷ್ ಪತ್ರಕರ್ತೆಯರು ಆಗೀಗ ನಟಿಯ ಸಂದರ್ಶನ ಪ್ರಕಟಿಸುವುದಕ್ಕೆ ಈ ಸಂಬಂಧ ತುಂಬಾ ಅನುಕೂಲ ಮಾಡಿಕೊಟ್ಟಿದೆ.

ಇಂಥ ನಟಿ ಛಾಯಾಚಿತ್ರಗಳ ವಿಷಯದಲ್ಲಿ ಬಲು ಕಟ್ಟುನಿಟ್ಟು. ತಲೆಗೂದಲು ಅಪ್ಪಿ ತಪ್ಪಿ ಕೆನ್ನೆಮೇಲೆ ಬಿದ್ದ ಚಿತ್ರವನ್ನು ಯಾರಾದರು ಪ್ರಕಟಿಸಿದರೂ ಅವರಿಗೆ ಸಿಟ್ಟು ಬರುತ್ತದೆ. ಮೊನ್ನೆ ಮೊನ್ನೆ ದಪ್ಪಗಿನ, ಕಪ್ಪಗಿನ ನಿರ್ದೇಶಕರು ಚಿತ್ರೀಕರಣದ ಸ್ಥಳಕ್ಕೆ ಛಾಯಾಗ್ರಾಹಕರೊಬ್ಬರನ್ನು ಕರೆದಿದ್ದರು. ಅಲ್ಲಿ ನೋಡಿದರೆ ಈ ನಟೀಮಣಿ. ಹತ್ತಿರದಿಂದ ಫೋಟೊ ತೆಗೆಯಲು ಆ ನಟಿ ಬಿಡಲೇ ಇಲ್ಲ. ಒಂದಿಷ್ಟು ದೇಹತೂಕ ಹೆಚ್ಚಿಸಿಕೊಂಡಿದ್ದರಿಂದಲೋ ಏನೋ ಫೋಟೊ ಈಗಲೇ ಪ್ರಕಟವಾಗುವುದು ಬೇಡ ಎಂಬುದು ನಟಿಯ ಹಟವಾಗಿತ್ತು. ಅಷ್ಟು ದೂರ ಹೋದಮೇಲೆ ಬರಿಗೈಲಿ ಬಂದರೆ ಮನಸ್ಸು ಒಪ್ಪೀತೆ? ಅವರು ದೂರದಿಂದ ಝೂಮ್ ಹಾಕಿ ಫೋಟೊಗಳನ್ನು ಕ್ಲಿಕ್ಕಿಸಿದರು. ಸಂಜೆ ಹೊತ್ತಿಗೆ ತಮ್ಮದೇ ವೆಬ್‌ಸೈಟ್‌ನಲ್ಲಿ ಅದನ್ನು ಪ್ರಕಟಿಸಿದರು. ಕೆಲವೇ ನಿಮಿಷಗಳಲ್ಲಿ ನಿರ್ದೇಶಕರಿಂದ ಫೋನ್ ಬಂತು. ಆ ಫೋಟೊಗಳನ್ನು ಎಲ್ಲೂ ಪ್ರಕಟಿಸಬಾರದೆಂಬ ವಿನಂತಿ. ಅವರ ಮಾತಿಗೆ ಬೆಲೆ ಕೊಟ್ಟು ಛಾಯಾಗ್ರಾಹಕರು ಅದನ್ನು ವೆಬ್‌ಸೈಟ್‌ನಿಂದ ತೆಗೆದುಹಾಕಿದರು. ಅಷ್ಟು ಹೊತ್ತಿಗೆ ಅವರು ತಮ್ಮ ಇನ್ನೊಬ್ಬ ಛಾಯಾಗ್ರಾಹಕ ಮಿತ್ರರಿಗೂ ಆ ಫೋಟೊಗಳನ್ನು ಕಳುಹಿಸಿಯಾಗಿತ್ತು. ಆ ಮಿತ್ರ ಇನ್ನೊಬ್ಬ ಇಂಗ್ಲಿಷ್ ಸುದ್ದಿಮಿತ್ರನ ಇನ್‌ಬಾಕ್ಸ್‌ಗೆ ಅದನ್ನು ದಾಟಿಸಿಯಾಗಿತ್ತು. ಆ ಪತ್ರಕರ್ತ ಸಾಮಾಜಿಕ ಜಾಲತಾಣಕ್ಕೇ ಫೋಟೊಗಳನ್ನು ತೇಲಿಬಿಡಬೇಕೆ? ನಟಿ ಪೊಲೀಸರಿಗೆ ದೂರು ಕೊಟ್ಟಾಗ ಈ 'ಜಾಲ'ಮರ್ಮದ ಬಿಸಿ ಅರಿವಿಗೆ ಬಂದಿದ್ದು. ದುರಂತವೆಂದರೆ ದೂರು ಕೊಟ್ಟದ್ದು ಫೋಟೊ ತೆಗೆದ ಛಾಯಾಗ್ರಾಹಕರ ಮೇಲೆ. ಕೋತಿ ತಾನು ಮೊಸರನ್ನ ತಿಂದು ಮೇಕೆ ಬಾಯಿಗೆ ಮೆತ್ತಿದಂತೆ ಮಾಡಿದ ಇಂಗ್ಲಿಷ್ ಸುದ್ದಿಮಿತ್ರ ಮಾತ್ರ ಈಗಲೂ ಸಾಮಾಜಿಕ ತಾಣಗಳಲ್ಲಿ ಆ ನಟಿಯನ್ನು ಕೆಣಕುತ್ತಾ ಸುಖಿಸುತ್ತಿದ್ದಾರೆ!

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68